C-NO-7729

# ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಅರಣ್ಯಪಡೆ ಮುಖ್ಯಸ್ಥರು, ಬೆಂಗಳೂರು ಇವರ ಕಚೇರಿ
## ಆದೇಶದ ಉದ್ಧರಣ

ಕಚೇರಿ ಆದೇಶ ಸಂಖ್ಯೆ: 185/2017-18 ದಿನಾಂಕ: 30.12.2017

ವಿಷಯ: ದ್ವಿತೀಯ ದರ್ಜೆ ಸಹಾಯಕರಿಗೆ ಪ್ರಥಮ ದರ್ಜೆ ಸಹಾಯಕರ ಹುದ್ದೆಗೆ ಬಡ್ತಿ ನೀಡುವ ಬಗ್ಗೆ.

ಉಲ್ಲೇಖ:
1) ಸರ್ಕಾರದ ಅಧಿಸೂಚನೆ ಸಂಖ್ಯೆ: ಎಫ್‌ಇಇ-54/ಎಫ್‌ಟಿಸಿ-90 ದಿನಾಂಕ 04.08.2003
2) ದಿನಾಂಕ: 01.03.2016, 20.06.2016, 19.11.2016, 22.02.2017 22.06.2017 ರಂದು ನಡೆದ ಇಲಾಖಾ ಮುಂಬಡ್ತಿ ಸಮಿತಿ ಸಭೆಯ ನಡವಳಿಗಳು.
3) ಈ ಕಚೇರಿ ಆದೇಶ ಸಂಖ್ಯೆ:108/2015-16 ದಿನಾಂಕ:21.03.2016 ಆದೇಶ ಸಂಖ್ಯೆ:41/2015-16 ದಿನಾಂಕ:26.07.2016, ಆದೇಶ ಸಂಖ್ಯೆ:120/2016-17 ದಿನಾಂಕ:15.11.2016 ಮತ್ತು ಆದೇಶ ಸಂಖ್ಯೆ:125/2016-17 ದಿನಾಂಕ:02.12.2016
4) ಈ ಕಚೇರಿ ಆದೇಶ ಸಂಖ್ಯೆ:51/2017-18 ದಿನಾಂಕ:29.06.2017
5) ಈ ಕಚೇರಿಯ ಅಧಿಸೂಚನೆ ಸಂಖ್ಯೆ:ಬಿ4:ವಿವಿಧ:ಸಿಆರ್:48: 2001-02 ದಿನಾಂಕ:31.12.2002
6) ಶ್ರೀ ಹೆಚ್.ಎನ್.ಪರಶಿವಮೂರ್ತಿ, ದ್ವಿತೀಯ ದರ್ಜೆ ಸಹಾಯಕರು, ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಚೇರಿ, ಯಲ್ಲಾಪುರ ವಿಭಾಗ, ಯಲ್ಲಾಪುರ ಇವರ ಮನವಿ ದಿ.24.03.2017 ಮತ್ತು 18-09-2017
7) ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಕೆನರಾ ವೃತ್ತ, ಶಿರಸಿ ಇವರ ಕಚೇರಿ ಪತ್ರ ಸಂಖ್ಯೆ:ಎ1/ಸಿಬ್ಬಂದಿ/ದ್ವಿ.ದ.ಸ/ಜ್ಯೇ.ಪ/2017-18 ದಿನಾಂಕ: 07.10.2017

******

ಪ್ರಸ್ತಾವನೆ:

ದ್ವಿತೀಯ ದರ್ಜೆ ಸಹಾಯಕರಿಗೆ ಪ್ರಥಮ ದರ್ಜೆ ಸಹಾಯಕರ ಹುದ್ದೆಗೆ ಬಡ್ತಿ ನೀಡಲು ಉಲ್ಲೇಖ(2)ರಲ್ಲಿ ಹೇಳಲಾದ ದಿನಾಂಕಗಳಂದು ಇಲಾಖಾ ಮುಂಬಡ್ತಿ ಸಮಿತಿ ಸಭೆಯನ್ನು ಜರುಗಿಸಲಾಗಿತ್ತು. ಸದರಿ ಸಭೆಯಲ್ಲಿ ಜ್ಯೇಷ್ಠತೆಯಲ್ಲಿ ಹಾಗೂ ರೋಸ್ಟರ್ ನಿಯಮಗಳನ್ವಯ ಅರ್ಹರಾದ ನೌಕರರ ಸೇವಾ ವಿವರಗಳನ್ನು ಹಾಗೂ ಕಾರ್ಯ ನಿರ್ವಹಣಾ ವರದಿಗಳನ್ನು ಪರಿಶೀಲಿಸಿ ದ್ವಿತೀಯ ದರ್ಜೆ ಸಹಾಯಕರಿಗೆ ಪ್ರಥಮ ದರ್ಜೆ ಸಹಾಯಕರ ಹುದ್ದೆಗೆ ಬಡ್ತಿ ನೀಡಲಾಗಿತ್ತು.

ಉಲ್ಲೇಖ(6)ರಲ್ಲಿ ಶ್ರೀ ಹೆಚ್.ಎನ್.ಪರಶಿವಮೂರ್ತಿ, ದ್ವಿತೀಯ ದರ್ಜೆ ಸಹಾಯಕರು, ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಚೇರಿ, ಯಲ್ಲಾಪುರ ವಿಭಾಗ, ಯಲ್ಲಾಪುರ ಇವರು ಈ ಕಚೇರಿಗೆ ಮನವಿ ಸಲ್ಲಿಸಿ, ಇವರು ಬ್ಯಾಕ್‌ಲಾಗ್ ಹುದ್ದೆಗಳಿಗೆ ಉಲ್ಲೇಖ(5)ರ ಈ ಕಚೇರಿ ಅಧಿಸೂಚನೆಯಂತೆ ನೇರ ನೇಮಕಾತಿಯಡಿ ದ್ವಿತೀಯ ದರ್ಜೆ ಸಹಾಯಕರ ಹುದ್ದೆಗೆ ಆಯ್ಕೆಯಾಗಿ ಉಪ ಅರಣ್ಯ ಸಂರಕ್ಷಣಾಧಿಕಾರಿ, ಯಲ್ಲಾಪುರ ವಿಭಾಗ ಇವರ ಅಧೀನದಲ್ಲಿ ಬರುವ ಮುಂಡಗೋಡ ವಲಯದಲ್ಲಿ ದಿನಾಂಕ:05.06.2003 ರಂದು ಕಾರ್ಯವರದಿ ಮಾಡಿಕೊಂಡಿದ್ದು, ಒಂದೇ ಅಧಿಸೂಚನೆಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳನ್ನು ಒಂದೇ ಬ್ಲಾಕ್ ಅವಧಿಯಲ್ಲಿ ಜ್ಯೇಷ್ಠತೆಯನ್ನು ನಿಗಧಿಪಡಿಬೇಕಾಗಿದ್ದು, ತನಗೆ ಬ್ಲಾಕ್ ಅವಧಿ 01.01.2003 ರಿಂದ 31.12.2003 ರಲ್ಲಿ ಜ್ಯೇಷ್ಠತಾ ಕ್ರಸಂ.1214 ಎಂದು ನಿಗದಿಪಡಿಸಲಾಗಿದೆ. ಹೀಗೆ ನಿಗದಿಪಡಿಸಿರುವುದರಿಂದ ತನ್ನ ಜ್ಯೇಷ್ಠತೆಗೆ ಧಕ್ಕೆಯುಂಟಾಗಿರುವುದಲ್ಲದೆ, ಸ್ಥಾನಪನ್ನ ಬಡ್ತಿ ನೀಡುವಲ್ಲಿಯೂ ಸಹ ಅನ್ಯಾಯವಾಗಿದ್ದು, ತನಗಿಂತ ಜ್ಯೇಷ್ಠತೆಯಲ್ಲಿ ಕಿರಿಯರಾದ ದ್ವಿತೀಯ ದರ್ಜೆ ಸಹಾಯಕರಿಗೆ ಪ್ರಥಮ ದರ್ಜೆ ಸಹಾಯಕರ ಹುದ್ದೆಗೆ ಈ ಕಚೇರಿ ಆದೇಶ ದಿನಾಂಕ:15.11.2016 ರಂದು ಸ್ಥಾನಪನ್ನ ಬಡ್ತಿ ನೀಡಲಾಗಿದೆ. ಅದುದರಿಂದ, ಈಗಾಗಲೇ ತನಗೆ ಈ ಕಚೇರಿ ಅಧಿಕೃತ ಜ್ಞಾಪನ ಪತ್ರ ದಿನಾಂಕ:28.04.2017 ರಲ್ಲಿ ಜ್ಯೇಷ್ಠತಾ ಕ್ರ.ಸಂ. (1188ಎ) ಎಂದು ಪುನರ್ ನಿಗದಿಪಡಿಸಲಾಗಿದೆ. ಅದರಂತೆ ತನಗೂ ಸಹ ಅದೇ ದಿನಾಂಕವನ್ನು ಪರಿಗಣಿಸಿ ಸ್ಥಾನಪನ್ನ ಬಡ್ತಿ ನೀಡಬೇಕೆಂದು ಕೋರಿಕೊಂಡಿರುತ್ತಾರೆ.

C.No. 7729

ಶ್ರೀ ಹೆಚ್.ಎನ್.ಪರಶಿವಮೂರ್ತಿ, ದ್ವಿತೀಯ ದರ್ಜೆ ಸಹಾಯಕರು ಇವರಿಗೆ ಉಲ್ಲೇಖ(4)ರ ಈ ಕಚೇರಿ ಆದೇಶದಲ್ಲಿ ಪ್ರಥಮ ದರ್ಜೆ ಸಹಾಯಕರ ಹುದ್ದೆಗೆ ನಿಯಮ-32ರಡಿ ಸ್ವತಂತ್ರ ಪ್ರಭಾರದಲ್ಲಿ ಬಡ್ತಿ ನೀಡಿ ನೇಮಿಸಲಾಗಿತ್ತು.

ಉಲ್ಲೇಖ(3) ರ ಈ ಕಚೇರಿ ಆದೇಶದಲ್ಲಿ ಶ್ರೀ ಹೆಚ್.ಎನ್.ಪರಶಿವಮೂರ್ತಿ, ದ್ವಿತೀಯ ದರ್ಜೆ ಸಹಾಯಕರು, ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಚೇರಿ, ಯಲ್ಲಾಪುರ ವಿಭಾಗ, ಯಲ್ಲಾಪುರ ಇವರಿಗಿಂತ ಕಿರಿಯರಿಗೆ ಬಡ್ತಿ ನೀಡಿರುವ ಆದೇಶ ದಿನಾಂಕವನ್ನೇ ಇವರಿಗೂ ಸಹ ಪರಿಗಣಿಸಲು ತೀರ್ಮಾನಿಸಲಾಯಿತು. ಅದರಂತೆ ಈ ಕೆಳಕಂಡ ಆದೇಶ.

## ಆ ದೇ ಶ

ಪ್ರಸ್ತಾವನೆಯಲ್ಲಿ ವಿವರಿಸಿದ ಕಾರಣಗಳ ಹಿನ್ನೆಲೆಯಲ್ಲಿ, ಶ್ರೀ ಹೆಚ್.ಎನ್.ಪರಶಿವಮೂರ್ತಿ, ಪಥಮ ದರ್ಜೆ ಸಹಾಯಕರು (ನಿಯಮ-32ರಲ್ಲಿರುವ) ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಚೇರಿ, ಯಲ್ಲಾಪುರ ವಿಭಾಗ, ಯಲ್ಲಾಪುರ ಇವರಿಗೆ ದಿನಾಂಕ:15.11.2016 ರಿಂದ ಪೂರ್ವಾನ್ವಯವಾಗಿ ಜಾರಿಗೆ ಬರುವಂತೆ ನಿಯಮ 42(ಬಿ) ಪ್ರಕಾರ ಪ್ರಥಮ ದರ್ಜೆ ಸಹಾಯಕರ ಹುದ್ದೆಯ ವೇತನ ಶ್ರೇಣಿ ರೂ. **14550-350-15600-400-17200-450-19000-500-21000-600-24600-700-26700** ರಲ್ಲಿ ಸ್ಥಾನಪನ್ನ ಬಡ್ತಿ ನೀಡಿ ಪ್ರಸ್ತುತ ಪ್ರಥಮ ದರ್ಜೆ ಸಹಾಯಕರಾಗಿ ಕರ್ತವ್ಯ ನಿರ್ವಹಿಸುತ್ತಿರುವ ಕಚೇರಿಯಲ್ಲಿಯೇ ಮುಂದುವರಿಸಲಾಗಿದೆ. ಇವರು ದಿನಾಂಕ:15.11.2016 ರಿಂದ ವೇತನ ನಿಗದಿಗೆ (Pay Fixation) ಅರ್ಹರಿರುತ್ತಾರೆ. ಆದರೆ ನೌಕರರು ಪ್ರಥಮ ದರ್ಜೆ ಸಹಾಯಕರ ಹುದ್ದೆಯಲ್ಲಿ ಕಾರ್ಯವರದಿ ಮಾಡಿಕೊಂಡ ದಿನಾಂಕದಿಂದ ಆರ್ಥಿಕ ಸೌಲಭ್ಯಗಳನ್ನು ಪಡೆಯಲು ಅರ್ಹರಿರುತ್ತಾರೆ.

ಷರತ್ತುಗಳು:

1. ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿನ ಸಿವಿಲ್ ಅಪೀಲು ಸಂಖ್ಯೆ:2368/2011 ಕ್ಕೆ ಸಂಬಂಧಿಸಿದಂತೆ ಮಾನ್ಯ ನ್ಯಾಯಾಲಯವು ನೀಡಿರುವ ತೀರ್ಪು ಹಾಗೂ ಈ ಸಂಬಂಧ ಹೊರಡಿಸಲಾದ ಸರ್ಕಾರದ ಆದೇಶದಂತೆ ಪ್ರಕಟಿಸಲಾಗುವ ಅಂತಿಮ ಜ್ಯೇಷ್ಠತಾ ಪಟ್ಟಿಯಲ್ಲಿನ ಜ್ಯೇಷ್ಠತೆಯು ಮೇಲ್ಕಂಡ ನೌಕರರಿಗೆ ಅಂತಿಮವಾಗಿ ಅನ್ವಯಿಸುತ್ತದೆ.
2. ಸರ್ಕಾರದಿಂದ ಈ ಸಂಬಂಧ ಹೊರಡಿಸಿರುವ/ಹೊರಡಿಸಲಾಗುವ ಇತರೆ ಆದೇಶಗಳನ್ನು ಪಾಲಿಸುವ ಷರತ್ತುಗಳಿಗೊಳಪಟ್ಟಿರುತ್ತದೆ.

30/11/17

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ.
(ಅರಣ್ಯಪಡೆ ಮುಖ್ಯಸ್ಥರು)

ಸಂಖ್ಯೆ: ಬಿ4:ಸಿಬ್ಬಂದಿ:ವಿವ- 49/2006-07

**ಪ್ರತಿಯನ್ನು ಈ ಕೆಳಕಂಡವರಿಗೆ ಮಾಹಿತಿ ಮತ್ತು ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.**

1) ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ.(ವನ್ಯಜೀವಿ), ಬೆಂಗಳೂರು
2) ಎಲ್ಲಾ ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ,
3) ಎಲ್ಲಾ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ ICT
4) ಉಪ ಅರಣ್ಯ ಸಂರಕ್ಷಣಾಧಿಕಾರಿ, ಯಲ್ಲಾಪುರ ವಿಭಾಗ, ಯಲ್ಲಾಪುರ.
5) ಸಂಬಂಧಪಟ್ಟ ನೌಕರರಿಗೆ ಮೇಲಾಧಿಕಾರಿಗಳ ಮುಖೇನ.
6) ಕಚೇರಿಯ ಆದೇಶದ ಕಡತಕ್ಕೆ
7) ಹೆಚ್ಚಿನ ಪ್ರತಿ,